GRANT OF GOVERNMENT LAND TO HARIJANS IN OLD MYSORE AREA DURING 1958–1959 AND 1960.

*Q.—317. Sri A. MUNIAPPA (Chickballapur).—

Will the Government be pleased to state:—

(*a*) the acreage of Government land granted in old Mysore area during the year 1958, 1959, and 1960 (District-wise figures may be furnished);

(*b*) the acreage out of the above granted to Harijans(District-wise figures may be furnished);

*A.—Sri KADIDAL MANJAPPA (Minister for Revenue).

(*a*)

		Area granted during 1958, 1959 & 1960
		Acres.
1.	Bangalore ...	8,973
2.	Bellary ...	59,99
3.	Chitradurga ...	51,634
4.	Kolar ...	12,120
5.	Tumkur ...	64,341
6.	Mandya ...	11,143
7.	Mysore ...	55,015
8.	Chickmagalur ...	29,905
9.	Hassan ...	42,788
10.	Shimoga ...	26,543
		3,62,456

(*b*) Information is not readily available.

ಶ್ರೀ ಎ. ಮುನಿಯಪ್ಪ.—ಹಿಂದಿನ ಮೈಸೂರು ಪ್ರದೇಶ ಭಾಗದಲ್ಲಿ ಹರಿಜನರಿಗೆ ಕೊಡುವುದಕ್ಕೆ ಮಂಜೂರು ಮಾಡಿದ ಜಮೀನನ್ನು ಮತ್ತು ಇನ್ನೂ ಹರಿಜನರಿಗೆ ಕೊಡದೇ ಉಳಿದುದನ್ನು ಸರಕಾರದವರು ವಶಪಡಿಸಿಕೊಂಡಿದ್ದಾರೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥಾದ್ದನ್ನು ಸರಕಾರದವರು ವಶಪಡಿಸಿಕೊಳ್ಳ ಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ಉತ್ತರ (ಬ)ನಲ್ಲಿ ಎವರಗಳು ಸುಲಭವಾಗಿ ದೊರಯುವುದಿಲ್ಲ ಎಂದು ಹೇಳಿದೆ. ಹಾಗಾದರೆ ಯಾವ ರೂಲ್ಸ್ ಪ್ರಕಾರ ಎಷ್ಟು ಎಕರೆ ಜಮೀನು ಹರಿಜನರಿಗೆ ಕೊಟ್ಟಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಆರ್ಡಿನರಿ ರೂಲ್ಸ್ ಪ್ರಕಾರ ಕೊಟ್ಟಿದೆ ಈಗ ಡಿಫ್ರೆಸ್ಡ್ ಕ್ಲಾಸ್ ಕನ್‌ಸೇಷನ್ ರೂಲ್ಸ್ ಎಲ್ಲಾ ಒಂದು ಮಾಡಿದೆ. 50 ಪರ್ಸೆಂಟು ಹರಿಜನರಿಗೆ ಮತ್ತು 50 ಪರ್ಸೆಂಟು ಉಳಿದವರಿಗೆ ಎಂದಿದೆ.

ಶ್ರೀ ಬಿ. ರಾಚಯ್ಯ.—ಈ ಎವರ ಒದಗಿಸುವದಕ್ಕೆ ಎಷ್ಟು ದಿವಸ ಬೇಕಾಗಬಹುದು?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ತಿಂಗಳು ಬೇಕಾಗಬಹುದು.

ಶ್ರೀ ವೈ. ರಾಮಕೃಷ್ಣ.—ಸರಕಾರದವರು ನೇರವಾಗಿ ಎಷ್ಟು ಎಕರೆ ಜಮೀನು ಹರಿಜನರಿಗೆ ಮಂಜೂರು ಮಾಡಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಅಧಿಕಾರಿಗಳಿಗೆ ಬಿಟ್ಟಿದ್ದೇವೆ. ಯಾರು ಬಂದು ರಿಕಾರ್ಡನ್ನು ಹಾಜರಿ ಪಡಿಸುತ್ತಾರೋ ಅಂಥವರ ವಿಚಾರದಲ್ಲಿ ಸರಕಾರಿ ಆರ್ಡರ್ ಪಾಸ್ ಮಾಡಲಾಗುತ್ತದೆ.

If records are submitted for sanction to Government, then only Government will pass orders.

Sri G. B. SHANKAR RAO.—Is forest land given for cultivation?

Sri KADIDAL MANJAPPA.—Yes.

Sri G. B. SHANKAR RAO.—Is it not the policy of the Government not to lease forest land for Cultivation?

Sri KADIDAL MANJAPPA.—The policy is, where there is not thick growth, we release such areas for cultivation.

ಶ್ರೀ ಯಸ್. ಸುಬ್ಬಯ್ಯನಾಯಕ್.—ಸರ್ಕಾರದವರು ನೇರವಾಗಿ ದರಖಾಸ್ತು ಕೊಡುವುದಕ್ಕೂ ಅಧಿಕಾರಿಗಳು ನೇರವಾಗಿ ಕೊಡುವುದಕ್ಕೂ ಇರುವ ವ್ಯತ್ಯಾಸವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ಜಮೀನು ಕೊಡಲು ಅಧಿಕಾರವಿರುವುದಿಲ್ಲ. ಆಗ ರಿಕಾರ್ಡ್ ಸರ್ಕಾರಕ್ಕೆ ಬಂದಾಗ ಸರ್ಕಾರ ಆರ್ಡರ್ ಮಾಡುತ್ತದೆ. ಉಳಿದ ಸಂದರ್ಭಗಳಲ್ಲಿ ಅಧಿಕಾರಿಗಳು ಕೊಡುತ್ತಾರೆ.

Sri G. B. SHANKAR RAO.—Will Government consider the request of persons who come forward to cultivate such lands in other districts also ?

Sri KADIDAL MANJAPPA.—There is demand from landless persons all over the State. But allotment depends on the availability of lands, the requirements of the forest Department and the need for safeguarding forest wealth.

ಶ್ರೀಮತಿ. ರತ್ನಮ್ಮ ಮಾಧವರಾವ್.—ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಎಕರೆ ಜಮೀನು ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—26543 ಎಕರೆ ಕೊಟ್ಟಿದೆ ಎಂದು ಉತ್ತರದಲ್ಲಿ ಹೇಳಿದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಹರಿಜನರಿಗೆ ಮತ್ತು ಷೆಡ್ಯುರ್ಡ್ ಜನಾಂಗದವರಿಗೆ ಕೊಟ್ಟಿರುವ ಜಮೀನನ್ನು ಪರಭಾರೆ ಮಾಡಿದರೆ ಸೂಕ್ತ ಕ್ರಮ ತೆಗೆದುಕೊಂಡು ಜಮೀನನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಅವರು ಮಾರಿದ್ದಾರೆಂದು ಹೇಳುವವರು ಯಾರು, ಸರ್ಕಾರ ಏನಾದರೂ ರಿಪೋರ್ಟ್ ತರಿಸಿಕೊಂಡಿದೆಯೇ ?

ಅಧ್ಯಕ್ಷರು.—ಆ ಪ್ರಶ್ನೆ ಇದರೊಳಗೆ ಬರುವುದಿಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ಹರಿಜನರಿಗೆ ಮತ್ತು ಷೆಡ್ಯುರ್ಡ್ ಜನಾಂಗದವರಿಗೆ ಕೊಟ್ಟಿರುವ ಜಮೀನನ್ನು ಪರಭಾರೆ ಮಾಡಿದ್ದಾರೆಯೇ ಎನ್ನುವ ವಿಚಾರದಲ್ಲಿ ಒಂದು ರಿಪೋರ್ಟ್ ತರಿಸುತ್ತೀರಾ?

ಅಧ್ಯಕ್ಷರು.—ಅದು ಬೇರೆ ಪ್ರಶ್ನೆಯಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಹರಿಜನರು ಜಮೀನುಗಳನ್ನು ಪರಭಾರೆಮಾಡಿದ್ದರೆ ವಾಪಸು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇತರ ಕೋಮಿನವರು ಮೂರು ಮೂರು ಸಲ ಜಮೀನನ್ನು ತೆಗೆದುಕೊಂಡು ಮಾರಾಟ ಮಾಡಿದ್ದಾರೆ. ಅವರಿಗೇನು ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೂ ಅದೇ ಮಂತ್ರ.

ಒಬ್ಬ ಸದಸ್ಯರು.—ಅದೇ ಮಂತ್ರವೆಂದರೇನು ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಂದಲೂ ಜಮೀನನ್ನು ವಾಪಸು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ, ಎಸ್. ಪುಟ್ಟಣ್ಣ.—ಸ್ವಾಮಿ ಹರಿಜನರಿಗೆ ಜಮೀನನ್ನು ಕೊಡುವುದು ಮುಫತ್ತಾಗಿ ಇತರರಿಗೆ upset ಬೆಲೆಗೆ ಕೊಡುತ್ತಿರಿ ಇಲ್ಲವೇ ಮಾರಾಟಮಾಡುತ್ತಿರಿ. ಇತರರಿಗೂ ಇದೇ ಮಂತ್ರ ಅನ್ವಯಿಸುತ್ತದೆಂದರೆ ಹೇಗೆ ? ಅದನ್ನು clarify ಮಾಡುತ್ತೀರಾ ?

Sri KADIDAL MANJAPPA.— That Supplementary was put in connection with the resumption of land for non-compliance of the Conditions of grant.

ಶ್ರೀ ಟಿ. ಹನುಮಯ್ಯ.—ಮೈಸೂರು ದೇಶದ ಹೊರಗಡೆಯಿಂದ ಬಂದಿರುವವರಿಗೆ ಎಷ್ಟು ಜಮೀನು ಕೊಟ್ಟಿದ್ದಿರಿ ?

ಶ್ರೀ ಕಡಿದಾಳ್‌ಮಂಜಪ್ಪ.—ಅದು ಗೊತ್ತಾಗುವುದಿಲ್ಲ.

ಶ್ರೀ ಮುಂಜಪ್ಪಉಳ್ಳಾಳ್.—ಭೂಮಿಯನ್ನು ಕೊಡುವಾಗ ಇವರಮೇಲೆ ಏನು Condition ಹಾಕಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—Land grant rules ನಲ್ಲಿ ವಿಧಾಯಕವಾಗಿರುವ ಕಂಡಿಷನ್‌ಗಳಿಗೆ ಅನುಸಾರವಾಗಿ ಕೊಡುತ್ತೇವೆ.

ಶ್ರೀ ಎ. ಮುನಿಯಪ್ಪ.—ತಹಸೀಲ್ದಾರರಿಗೆ ನಾಲ್ಕು ಎಕರೆ, ಸಬ್‌ಡಿವಿಷ್ ಅಧಿಕಾರಿಗಳಿಗೆ ಐದು ಎಕರೆ, ಡೆಪ್ಯುಟಿ ಕಮಿಷನರಿಗೆ ಹತ್ತು ಎಕರೆ ಕೊಡಲು ಅಧಿಕಾರವಿರುವುದರಿಂದ ಆ ರೀತಿ ಜಮೀನು ಮುಂಜೂರು ಮಾಡಿ ಸಾಗುವಳಿ ಚೀಟಿ ಕೊಟ್ಟಮೇಲೆ, ಕೆಲವರು ಮಂತ್ರಿಗಳ ಹತ್ತಿರ ಬಂದು ಅಧಿಕಾರಿಗಳು ಮಾಡಿರುವ ಆರ್ಡರನ್ನು ಬಿಟ್ಟು, ಮಂತ್ರಿಗಳಿಂದ ಬೇರೆ ರೀತಿ ಆರ್ಡರ್ ಮಾಡಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಸಾರಿ ಜಮೀನನ್ನು ಕೊಟ್ಟಮೇಲೆ ಮಂತ್ರಿಗಳು ಆರ್ಡರ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಒಂದು ಸಲ ಒಬ್ಬರಿಗೆ ಮುಂಜೂರಾಗಿರುವ ಜಮೀನಿಗೆ ಬೇರೆಯವರಿಗೆ ಮಂತ್ರಿಗಳ ಆಜ್ಞೆ ಪ್ರಕಾರ ಸಾಗುವಳಿ ಚೀಟಿಯನ್ನು ಕೊಡತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ?

Sri KADIDAL MANJAPPA.—I receive every day about 100 to 150 petitions. Since I do not have the relavent records with me, I simply pass an order to the effect that if the person is eligible, if land is available, the petitioner may be granted a reasonable extent of land. That is not in fact an order, but only a direction. This is what the Hon'ble. Members are referring to.

Sri J. P. SARVESH.—May I know the total acreage of land granted in the whole State.

Sri KADIDAL MANJAPPA.—About 4 lakhs and 39 or 40 thousand acres. It may be about 4½ lakhs acres.

Sri G. DUGGAPPA.—According to land grant rules, a certain percentage of land is reserved for the purpose of being granted to Harijans. The answer now given is that 3 lakhs 62 thousand acres have been granted. May I know the percentage of this land granted to harijans ?

Sri KADIDAL MANJAPPA.—I do not have the figures with me now. It takes time to collect the tactual figures, but in one district, I know it comes to about 60 per cent.

ARECA GARDENS AND PADDY FIELDS UNDER DEVANAKERE TANK ACHKAT IN BIRUR.

* *Q.*—382. Sri D. H. RUDRAPPA (Birur).—

Will the Government be plased to state.—

(*a*) the total acreage of areca gardens and paddy fields under Devanakere tank achkat in Birur ;

(*b*) the capacity of the above tank ;

(*c*) whether there is any new achkat that comes under the above tank for irrigation and if so, the arrangements made by the Public Works Department in that behalf ?

A.—Sri M. N. NAGHNOOR (Deputy Minister for Public Works).—

(*a*) Areca garden	...	325—14
Coconut, Betel leaves and Plantain		37—28
Wet lands	...	703—24
Total		1,066—26

(*b*) 196 units.

(*c*) No; no arrangements are therefore, made by the Public Works Department.

ಶ್ರೀ ಡಿ. ಎಚ್. ರುದ್ರಪ್ಪ.—ಕೆರೆಯು Capacity 196 ಯೂನಿಟ್ ಎಂದು ಹೇಳಿದ್ದಿರಿ. ಇದರಿಂದ 1,066 ಎಕರೆ ಜಮೀನಿನಲ್ಲಿ ನೀರಾವರಿಗೆ ವ್ಯವಸಾಯಮಾಡಲು ಸಾಧ್ಯವೇ ?

†ಶ್ರೀ ಎಂ. ಎನ್. ನಾಗನೂರ್.—ಅದು ಮಲೆನಾಡು ಪ್ರದೇಶ. ಇಲ್ಲಿಯವರೆಗೂ ಬಂದಿರುವ ನಮ್ಮ ಅನುಭವದ ಪ್ರಕಾರ ಯಾವತೊಂದರೆಯೂ ಆಗಿಲ್ಲ.

ಶ್ರೀ ಡಿ. ಎಚ್. ರುದ್ರಪ್ಪ.—ಕೆರೆಯು ಈಗಿನ ಸ್ಥಿತಿಯಲ್ಲಿ ಬಹಳ ಅಪಾಯದಲ್ಲಿರುವುದರಿಂದ ಇದನ್ನು ಬಂದೋಬಸ್ತು ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಡಿದ್ದೀರಾ ?

ಶ್ರೀ ಎಂ. ಎನ್. ನಾಗನೂರ್.—ಮಾನ್ಯ ಸದಸ್ಯರು ಹೇಳುವುದು ನಿಜ. ಕೆರೆಯು ಏರಿ ನಾದುರಸ್ತಾಗಿದೆ. ಚೀಫ್ ಇಂಜಿನಿಯರು ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. 1,34,000 ರೂಪಾಯಿಗಳಿಗೆ ಅಂದಾಜು ತಯಾರಾಗಿದೆ. ಆದಷ್ಟು ಬೇಗನೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.